# KANNADA

## ಕನ್ನಡ

## PAPER—II

## ಪತ್ರಿಕೆ—II

**Note :** This paper contains **fifty** (50) objective-type questions, each question carrying **two** (2) marks. Attempt all of them.

**ಸೂಚನೆ :** ಈ ಪತ್ರಿಕೆಯಲ್ಲಿ ಬಹು ಆಯ್ಕೆಯ **ಐವತ್ತು** (50) ಪ್ರಶ್ನೆಗಳಿರುತ್ತವೆ. ಪ್ರತಿಯೊಂದು ಪ್ರಶ್ನೆಗೂ **ಎರಡು** (2) ಅಂಕಗಳು ಇರುತ್ತವೆ. **ಎಲ್ಲಾ** ಪ್ರಶ್ನೆಗಳನ್ನು ಉತ್ತರಿಸಿ.

ಏಕ ಆಯ್ಕೆ ಮಾದರಿಯ ಪ್ರಶ್ನೆಗಳು :

**1.** 'ಸಾಧುಗೆ ಸಾಧು ಮಾಧುರ್ಯಂಗೆ ಮಾಧುರ್ಯಂ' ಎಂಬ ವಾಕ್ಯವಿರುವ ಶಾಸನ

(A) ಹಲ್ಮಿಡಿ ಶಾಸನ (B) ಬಾದಾಮಿ ಶಾಸನ

(C) ಆತಕೂರು ಶಾಸನ (D) ಶ್ರವಣಬೆಳ್ಗೊಳ ಶಾಸನ

**2.** ಕವಿರಾಜಮಾರ್ಗವು ಒಂದು

(A) ಲಕ್ಷಣ ಗ್ರಂಥ (B) ವ್ಯಾಕರಣ ಗ್ರಂಥ

(C) ಛಂದೋಗ್ರಂಥ (D) ವ್ಯಾಖ್ಯಾನ ಗ್ರಂಥ

**3.** ಇದು ಗದ್ಯಪ್ರಧಾನವಾದ ಚಂಪೂ ಗ್ರಂಥ

(A) ಜಗನ್ನಾಥ ವಿಜಯ (B) ಕರ್ನಾಟಕ ಕಾದಂಬರಿ

(C) ಪಂಚತಂತ್ರ (D) ಆದಿಪುರಾಣ

**4.** 'ಮನಸಿಜನ ಮಾಯೆ ವಿಧಿವಿಳಸನದ ನೆರಂಬಡೆಯೆ ಕೊಂದು ಕೂಗದೆ ನರರಂ' ಎಂದು ಹೇಳಿದ ಕವಿ

(A) ನಾಗಚಂದ್ರ (B) ನಾಗವರ್ಮ

(C) ರನ್ನ (D) ಜನ್ನ

www.examrace.com

5. 'ತಲ್ಲಣಿಸದಿರು ಕಂಡ್ಯ ತಾಳು ಮನವೆ' – ಇದು ಈ ಹರಿದಾಸರ ಉಕ್ತಿ

(A) ಕನಕದಾಸರು  (B) ಪುರಂದರದಾಸರು

(C) ವಾದಿರಾಜರು  (D) ಗೋಪಾಲದಾಸರು

6. ದೇವರ ದಾಸಿಮಯ್ಯನ ಅಂಕಿತ

(A) ಕಪಿಲಸಿದ್ಧಮಲ್ಲಿಕಾರ್ಜುನ  (B) ರಾಮನಾಥಾ

(C) ಗುಹೇಶ್ವರಾ  (D) ಕೂಡಲಸಂಗಮದೇವ

7. 'ಉಪಮಾಲೋಲ' ಎಂಬ ಬಿರುದಾಂಕಿತ ಕವಿ

(A) ಕುಮಾರವ್ಯಾಸ  (B) ರಾಘವಾಂಕ

(C) ಚಾಮರಸ  (D) ಲಕ್ಷ್ಮೀಶ

8. ಬಾಣಭಟ್ಟನ ಕಾದಂಬರಿಯನ್ನು ಕನ್ನಡಕ್ಕೆ ತಂದ ಕವಿ

(A) ನಾಗರಾಜ  (B) ನಾಗಚಂದ್ರ

(C) ನಾಗವರ್ಮ  (D) ನಯಸೇನ

9. 'ನಿಂದಾಸ್ತುತಿ' ಎಂಬ ಸಾಹಿತ್ಯ ಪ್ರಕಾರವನ್ನು ರಚಿಸಿದವರು

(A) ಹರಿದಾಸರು  (B) ಶಿವಶರಣರು

(C) ಸಾಂಗತ್ಯ ಕವಿಗಳು  (D) ನವ್ಯಕವಿಗಳು

10. ಕುಮಾರವ್ಯಾಸ ಭಾರತದ ಸರಿಯಾದ ಹೆಸರು

(A) ಕರ್ಣಾಟಕ ಭಾರತ ಕಥಾಮಂಜರಿ  (B) ಕರ್ಣಾಟ ಭಾರತ ಕಥಾಮಂಜರಿ

(C) ಕರ್ನಾಟ ಭಾರತ ಕಥಾಮಂಜರಿ  (D) ಕರ್ನಾಟಕ ಭಾರತ ಕಥಾಮಂಜರಿ

11. 'ತೆರೆದ ಬಾಗಿಲು' ಕವನ ಸಂಕಲನದ ಕವಿ

(A) ಕೆ.ಎಸ್.ನರಸಿಂಹ ಸ್ವಾಮಿ  (B) ರಾಮಚಂದ್ರಶರ್ಮ ಬಿ.ಸಿ.

(C) ಗೋಪಾಲಕೃಷ್ಣ ಅಡಿಗ  (D) ಯು.ಆರ್.ಅನಂತಮೂರ್ತಿ

www.examrace.com

12. ಇದು ಚಂದ್ರಶೇಖರ ಪಾಟೀಲ ಅವರ ನಾಟಕ

(A) ಜೋಕುಮಾರ ಸ್ವಾಮಿ
(B) ಅಗ್ನಿ ಮತ್ತು ಮಳೆ
(C) ಗೋಕರ್ಣದ ಗೌಡಶಾನಿ
(D) ಸಂಕ್ರಾಂತಿ

13. 'ಸಮರಸವೇ ಜೀವನ' ಕಾದಂಬರಿಯ ಕರ್ತೃ

(A) ಶಿವರಾಮ ಕಾರಂತ
(B) ಅ.ನ.ಕೃ
(C) ಬಸವರಾಜ ಕಟ್ಟೀಮನಿ
(D) ವಿ.ಕೃ. ಗೋಕಾಕ

14. 'ಕಂಬನಿ' ಕಥಾಸಂಕಲನವನ್ನು ರಚಿಸಿದವರು

(A) ವೈದೇಹಿ
(B) ಕೊಡಗಿನ ಗೌರಮ್ಮ
(C) ತ್ರಿವೇಣಿ
(D) ಅನುಪಮಾ ನಿರಂಜನ

15. ವಕ್ರೋಕ್ತಿ ತತ್ವದ ಪ್ರತಿಪಾದಕ

(A) ಕುಂತಕ
(B) ಕ್ಷೇಮೇಂದ್ರ
(C) ವಾಮನ
(D) ಭಾಮಹ

16. ಲಾಂಜಿನಸ್ ಪ್ರತಿಪಾದಿಸಿದ ತತ್ವ

(A) ಶೋಧನ
(B) ವಸ್ತು ಪ್ರತಿರೂಪ
(C) ಮಾನಸಿಕ ದೂರ
(D) ಭವ್ಯತೆ

17. 'ಯತಿ ವಿಲಂ ಘನದಿಂದರಿದಲ್ತೆ ಕನ್ನಡಂ' – ಈ ಹೇಳಿಕೆಯ ಕರ್ತೃ

(A) ಭಟ್ಟಾ ಕಳಂಕ
(B) ಕೇಶವಭಟ್ಟ
(C) ಕೇಶಿರಾಜ
(D) ನಾಗವರ್ಮ

18. ಇದು 'ಕರ್ನಾಟಕ ವಿಷಯಜಾತಿ' ಯಲ್ಲಿ ಸೇರುತ್ತದೆ.

(A) ಶಾರ್ದೂಲವಿಕ್ರೀಡಿತ
(B) ಪಿರಿಯಕ್ಕರ
(C) ಹರಿಣಿ ವೃತ್ತ
(D) ಕಂದ

www.examrace.com

19. ‘ಕಮಲಾಕ್ಷ’ ಎಂಬುದು

(A) ಬ್ರಹ್ಮಗಣ

(B) ರುದ್ರಗಣ

(C) ವಿಷಮಗಣ

(D) ವಿಷ್ಣುಗಣ

20. ಹಾಲಕ್ಕಿ ಕನ್ನಡವು

(A) ಜನಾಂಗಿಕ ಉಪಭಾಷೆ

(B) ಪ್ರಾದೇಶಿಕ ಉಪಭಾಷೆ

(C) ಇಂಡೋ ಆರ್ಯನ್ ಭಾಷೆ

(D) ಮೂಲ ಭಾಷೆ

21. ಇವುಗಳು ಷಟ್ಪದಿ ಕಾವ್ಯಗಳು

1. ಶಬರಶಂಕರ ವಿಲಾಸ ; ಧರ್ಮಾಮೃತ
2. ನಳಚರಿತ್ರೆ ; ಬಸವಪುರಾಣ
3. ಹರಿಭಕ್ತಿಸಾರ ; ಹರಿಕಥಾಮೃತಸಾರ
4. ಹದಿಬದೆಯ ಧರ್ಮ ; ಲೋಕೋಪಕಾರ

ಇವುಗಳಲ್ಲಿ ಸರಿಯಾದ ಉತ್ತರ

(A) 1 ಮತ್ತು 3

(B) 2 ಮತ್ತು 3

(C) 3 ಮತ್ತು 4

(D) 1 ಮತ್ತು 4

22. ಇವರು ಜೈನ ಕವಿಗಳು

1. ಬ್ರಹ್ಮಶಿವ
2. ದುರ್ಗಸಿಂಹ
3. ನಯಸೇನ
4. ಚಾಮರಸ

ಇವುಗಳಲ್ಲಿ ಸರಿಯಾದ ಉತ್ತರ

(A) 1 ಮತ್ತು 3

(B) 2 ಮತ್ತು 3

(C) 3 ಮತ್ತು 4

(D) 1 ಮತ್ತು 4

23. ಇವು ಪ್ರಗತಿಶೀಲ ಪಂಥದ ಕೃತಿಗಳು

1. ವೈಶಾಖ
2. ಚಿರಸ್ಮರಣೆ
3. ಕಂಬನಿಯ ಕುಯಿಲು
4. ಸೂರ್ಯ

ಇವುಗಳಲ್ಲಿ ಸರಿಯಾದ ಉತ್ತರ

(A) 3 ಮತ್ತು 4

(B) 3 ಮತ್ತು 1

(C) 2 ಮತ್ತು 3

(D) 1 ಮತ್ತು 2

www.examrace.com

24. ಇವು ಅರ್ಥಾಲಂಕಾರಗಳು

1. ದೀಪಕ
2. ದೃಷ್ಟಾಂತ
3. ಯಮಕ
4. ಸಂದೇಹ

ಇವುಗಳಲ್ಲಿ ಸರಿಯಾದ ಉತ್ತರ

(A) 1, 3 ಮತ್ತು 4
(B) 2, 3 ಮತ್ತು 4
(C) 1, 2 ಮತ್ತು 3
(D) 1, 2 ಮತ್ತು 4

25. ರಸತತ್ವದ ಚಿಂತಕರು

1. ಭರತ
2. ಆನಂದವರ್ಧನ
3. ದಂಡಿ
4. ಅಭಿನವಗುಪ್ತ

ಇವುಗಳಲ್ಲಿ ಸರಿಯಾದ ಉತ್ತರ

(A) 1 ಮತ್ತು 2
(B) 1 ಮತ್ತು 4
(C) 2 ಮತ್ತು 3
(D) 3 ಮತ್ತು 4

26. ಪಂಪ ಪ್ರಶಸ್ತಿ ಪುರಸ್ಕೃತರು

1. ಎಸ್.ಎಲ್.ಭೈರಪ್ಪ
2. ಎಲ್.ಬಸವರಾಜು
3. ಎಂ.ಎಂ.ಕಲಬುರ್ಗಿ
4. ಕೆ.ಎಸ್.ನಿಸಾರ್ ಅಹಮದ್

ಇವುಗಳಲ್ಲಿ ಸರಿಯಾದ ಉತ್ತರ

(A) 2 ಮತ್ತು 3
(B) 2 ಮತ್ತು 4
(C) 1 ಮತ್ತು 3
(D) 1 ಮತ್ತು 4

27. ಇವರು ನವ್ಯೋದಯ ಪಂಥದ ವಿಮರ್ಶಕರು

1. ಡಿ.ಆರ್.ನಾಗರಾಜ
2. ಮಾಸ್ತಿ ವೆಂಕಟೇಶ ಅಯ್ಯಂಗಾರ್
3. ಕೀರ್ತಿನಾಥ ಕುರ್ತಕೋಟಿ
4. ಯು.ಆರ್. ಅನಂತ ಮೂರ್ತಿ

ಇವುಗಳಲ್ಲಿ ಸರಿಯಾದ ಉತ್ತರ

(A) 1 ಮತ್ತು 4
(B) 2 ಮತ್ತು 4
(C) 1 ಮತ್ತು 3
(D) 2 ಮತ್ತು 3

www.examrace.com

28. ಇವು ಪೋರ್ಚುಗೀಸ್ ಮೂಲದ ಪದಗಳು

1. ಇಸಿಲ
2. ಪಗಾರ
3. ಸಂತೆ
4. ಇಸ್ತ್ರಿ

ಇವುಗಳಲ್ಲಿ ಸರಿಯಾದ ಉತ್ತರ

(A) 2 ಮತ್ತು 3
(B) 2 ಮತ್ತು 4
(C) 1 ಮತ್ತು 3
(D) 1 ಮತ್ತು 4

29. ಇವು ಕರ್ಮಧಾರಯ ಸಮಾಸಗಳು

1. ತಂಗಾಳಿ
2. ನೀಲಾದ್ರಿ
3. ತಲೆನೋವು
4. ಹರಿಹರರು

ಇವುಗಳಲ್ಲಿ ಸರಿಯಾದ ಉತ್ತರ

(A) 1 ಮತ್ತು 4
(B) 1 ಮತ್ತು 3
(C) 1 ಮತ್ತು 2
(D) 2 ಮತ್ತು 4

30. ಇವು ಅನುಕರಣ ಅವ್ಯಯಗಳು

1. ಥಳಥಳ
2. ಸಮಸಮ
3. ಸಿಮಿಸಮಿ
4. ಕಟಕಟ

ಇವುಗಳಲ್ಲಿ ಸರಿಯಾದ ಉತ್ತರ

(A) 1 ಮತ್ತು 3 ಹಾಗೂ 4
(B) 1 ಮತ್ತು 2 ಹಾಗೂ 3
(C) 1 ಮತ್ತು 4 ಹಾಗೂ 2
(D) 2 ಮತ್ತು 3 ಹಾಗೂ 4

<u>ಲೇಖನ ಭಾಗ ಆಧಾರಿತ ಬಹು ಆಯ್ಕೆಯ ಮಾದರಿ :</u>

ಈ ಕೆಳಗಿನ ಲೇಖನ ಭಾಗವನ್ನು ಓದಿ, ಅದನ್ನು ಆಧರಿಸಿದ ಪ್ರಶ್ನೆಗಳಿಗೆ ಉತ್ತರಿಸಿ.

ಸರಿಯಾದ ಉತ್ತರಗಳ ಸಂಜ್ಞೆಗಳನ್ನು ನಿಗದಿತ ಸ್ಥಳದಲ್ಲಿ ಗುರುತಿಸಿ.

ಸಾವಿರ ವರ್ಷದ ಹಳಮೆಯನ್ನು ಹೊಂದಿದ ಕನ್ನಡ ಸಾಹಿತ್ಯ ಸಮೃದ್ಧಿ ಹಾಗೂ ಸತ್ವದ ದೃಷ್ಟಿಯಿಂದ ತುಂಬ ಗಮನಾರ್ಹವಾದುದಾಗಿದೆ. ಭಾರತೀಯ ಸಾಹಿತ್ಯಗಳಲ್ಲಿಯೇ ಎದ್ದು ಕಾಣುವಂಥದಾಗಿದೆ. ಹತ್ತನೇ ಶತಮಾನದಿಂದ ತೊಡಗಿ ಎಲ್ಲೂ ಸ್ಥಗಿತಗೊಳ್ಳದೆ ಇದು ನಿರಂತರವಾಗಿ ಬೆಳೆಯುತ್ತ ಬಂದಿದೆ. ಆಯಾ ಕಾಲ ಘಟ್ಟದ ಜನತೆಯ ಆಶೋತ್ತರಗಳಿಗೆ ಸ್ಪಂದಿಸುತ್ತ ಬಂದುದೂ ಇದರ ವಿಶೇಷತೆಯಾಗಿದೆ. ಹೀಗೆ ನಡೆದು ಬಂದುದರ ಜೊತೆಗೆ ಇದರ ಸೃಷ್ಟಿಗೆ ಹಿನ್ನೆಲೆಯಾಗಿರುವ ಪ್ರೇರಕ ಅಂಶಗಳಾವುವು? ಆಯಾ ಕಾಲದಲ್ಲಿ ಅದು ತಾಳುತ್ತ ಬಂದ ಧೋರಣೆಗಳಾವುವು? ಎಂಬುದನಿಲ್ಲಿ ಅರಿಯಲೆತ್ನಿಸಿದೆ.

ಹಳಗನ್ನಡ, ನಡುಗನ್ನಡ ಸಾಹಿತ್ಯದ ವ್ಯಾಪ್ತಿ ತುಂಬಾ ದೊಡ್ಡದು. ಇಪ್ಪತ್ತನೇ ಶತಮಾನದ ಸಾಹಿತ್ಯವನ್ನು ಮಾತ್ರ ಹೊರತುಪಡಿಸಿ ಇಡೀ ಕನ್ನಡ ಸಾಹಿತ್ಯವೇ ಇವುಗಳ ವ್ಯಾಪ್ತಿಗೆ ಒಳಪಡುವುದು. ಸುಮಾರು ೯೦೦ ವರ್ಷಗಳಲ್ಲಿ ಬೆಳೆದುಬಂದ ಸಾಹಿತ್ಯವನ್ನೆಲ್ಲ ಇಲ್ಲಿ ಸಮೀಕ್ಷಿಸುವುದು ಸಾಧ್ಯವಿಲ್ಲ. ಸ್ಥೂಲವಾಗಿ ಪ್ರಮುಖ ಕವಿ–ಕೃತಿಗಳನ್ನು ಇಲ್ಲಿ ವಿಶ್ಲೇಷಣೆಗೆ ಎತ್ತಿಕೊಳ್ಳಬಹುದು. ಹಳಗನ್ನಡ ಸಾಹಿತ್ಯವೆಂದರೆ ಚಂಪೂ ಕೃತಿಗಳ ಸಮೂಹವೇ. ಜೈನರೇ ಈ ಸಾಹಿತ್ಯವನ್ನು ಹೆಚ್ಚಾಗಿ ರಚಿಸಿದ್ದಾರೆ. ಇವರು ರಾಜಾಶ್ರಯದಲ್ಲಿದ್ದು ಕೃತಿ ರಚಿಸಿದ್ದು, ಇವರ ಕೃತಿಗಳ ವಸ್ತು ಸಂಸ್ಕೃತ–ಪ್ರಾಕೃತ ಭಾಷಾ ಸಾಹಿತ್ಯಗಳಿಂದ ಹೆಚ್ಚಾಗಿ ತಂದುದಾಗಿದೆ. ಪ್ರೌಢರಚನೆ, ಪಂಡಿತ ಸಮ್ಮುಖ ಧೋರಣೆ ಧರ್ಮದ ತಾತ್ವಿಕ ಮುಖ ಕಾರಣವಾಗಿ ಇವರ ಸಾಹಿತ್ಯಕ್ಕೆ ಒಂದು ಮಿತಿ ಪ್ರಾಪ್ತವಾಯ್ತು. ಪಂಡಿತ ಸಮ್ಮುಖ ಧೋರಣೆಯೇ ಈ ಸಾಹಿತ್ಯದ ಜೀವಾಳವಾದುದರಿಂದ ಸಾಮಾನ್ಯ ಜನರಿಗೆ ಇದು ಅಷ್ಟಾಗಿ ತಲುಪಲೇ ಇಲ್ಲ ಮತ್ತು ಕವಿಗಳು ತಲುಪಿಸಬೇಕೆಂಬ ಉತ್ಸುಕತೆಯನ್ನು ತೋರಲಿಲ್ಲ. ಅವರ ಉದ್ದೇಶ ಪಂಡಿತರನ್ನು ಮೆಚ್ಚಿಸುವುದು, ರಾಜರನ್ನು ಸಂತುಷ್ಟಗೊಳಿಸುವುದು ಆಗಿತ್ತು. ಇಂಥ ಮಿತಿಗಳ ಮಧ್ಯೆಯೂ ಕೆಲ ಜೈನ ಕವಿಗಳು ಶ್ರೇಷ್ಠ ಕೃತಿಗಳನ್ನು ರಚಿಸಿದ್ದಾರೆ.

ನಡುಗನ್ನಡ ಸಾಹಿತ್ಯ ಹನ್ನೆರಡನೇ ಶತಮಾನದ ಬಸವಾದಿ ಶರಣರಿಂದ ಮೊದಲಾಗುವುದು. ಅನಂತರ ವೀರಶೈವ ಕವಿಗಳು ಹರಿದಾಸರು ಹಾಗೂ ಸರ್ವಜ್ಞ ಮುಂತಾದವರು ಸೃಷ್ಟಿಸಿದ ಈ ಸಾಹಿತ್ಯ ಮೊಟ್ಟ ಮೊದಲು ಇಟ್ಟ ದಿಟ್ಟ ಹೆಜ್ಜೆಗಳೆಂದರೆ ರಾಜಾಶ್ರಯದಿಂದ ದೂರಾದುದು, ಪಂಡಿತ ಸಮ್ಮುಖ ಧೋರಣೆಗಳನ್ನು ತೆಳುಗೊಳಿಸಿ ಜನಸಮ್ಮುಖ ಧೋರಣೆಗಳನ್ನು ತುಂಬಿಕೊಂಡುದು ಹಾಗೂ ಜನಪರ ಒಲವುಗಳಿಗೆ ಸ್ಪಂದಿಸುತ್ತ ಬಂದುದು. ಧರ್ಮ–ತತ್ವ ನೀತಿ ಇವೆಲ್ಲ ಇದರಲ್ಲಿ ಬಂದರೂ ಇದು ಯಾವ ಕಟ್ಟುಪಾಡುಗಳಿಗೂ ಒಳಗಾಗಿಲ್ಲ. ನಡುಗನ್ನಡ ಸಾಹಿತ್ಯ ಜನಸಮ್ಮುಖವಾಗಲು ಇನ್ನೊಂದು ಪ್ರಮುಖ ಕಾರಣವೆಂದರೆ ಸಂಸ್ಕೃತವನ್ನು ಧಿಕ್ಕರಿಸಿ ಕನ್ನಡ ಭಾಷೆಯನ್ನು ಬಳಸಿಕೊಂಡುದು. ಸಂಸ್ಕೃತ ಭಾಷೆಯನ್ನು ಚೆನ್ನಾಗಿ ಅರಿತ ಕೆಲ ವಚನಕಾರರು ಅಲ್ಲಿನ ಒಳ್ಳೆಯ ಅಂಶಗಳನ್ನು ಕನ್ನಡದಲ್ಲಿ ಸಾಮಾನ್ಯ ಜನರು ನಿತ್ಯ ಆಡುವ ಭಾಷೆಯಲ್ಲಿ ಹೇಳಿದರು. ಆದಕ್ಕೇ ಈ ಸಾಹಿತ್ಯ ಸಾಮಾನ್ಯ ಜನರಿಗೆ ಹಿಡಿಸಿತು; ಹತ್ತಿರವಾಯಿತು.



www.examrace.com

ಹಳಗನ್ನಡ ಸಾಹಿತ್ಯದ ಪ್ರಮುಖ ಧೋರಣೆಗಳೆಂದರೆ ಧರ್ಮ, ರಾಜಾಶ್ರಯ ಸಂಸ್ಕೃತ, ಪ್ರಾಕೃತದಂತಹ ಅನ್ಯಭಾಷೆಗಳು. ಧರ್ಮವಂತೂ ಅತ್ಯಂತ ಪ್ರಬಲವಾದ ಪ್ರೇರಣೆಯನ್ನೊದಗಿಸಿದೆ. ಸಾಮಾನ್ಯವಾಗಿ ಎಲ್ಲಿ ಜೈನ ಕವಿಗಳೂ ತೀರ್ಥಂಕರರ ಚರಿತ್ರೆಯನ್ನು ಪುರಾಣ ರೂಪದಲ್ಲಿ ಬರೆದಿದ್ದಾರೆ. ಧರ್ಮಪ್ರಸಾರವೇ ಇವುಗಳ ಮುಖ್ಯ ಧ್ಯೇಯ. ಧರ್ಮ–ಸಾಹಿತ್ಯ ಬೇರೆ ಬೇರೆ ಅಲ್ಲ, ಎರಡೂ ಒಂದೇ ಎಂಬ ಭಾವನೆ ಆಗಿನ ಕವಿಗಳಲ್ಲಿತ್ತು. ಧರ್ಮವನ್ನು ಹೊರಗಿರಿಸಿ ಸಾಹಿತ್ಯ ರಚನೆ ಅಂದು ಅಸಾಧ್ಯವೇ ಆಗಿತ್ತು. ಸಾಹಿತ್ಯ ರಚನೆ ಆಗ ಕವಿಗಳಿಗೆ ಧಾರ್ಮಿಕ ಚಟುವಟಿಕೆಯೇ ಆಗಿತ್ತು. ಮೋಕ್ಷ ಸಂಪಾದನೆ ಕಾವ್ಯ ರಚನೆ ಹಾಗೂ ಕಾವ್ಯಾಸ್ವಾದದಿಂದ ಸಾಧ್ಯವೆಂದು ನಂಬಿದ್ದರು. ಏನೆ ನಡೆದರೂ ಧರ್ಮದ ಚೌಕಟ್ಟಿನಲ್ಲಿಯೇ ಅಂದು ನಡೆಯುತ್ತಿದ್ದವು. ಧರ್ಮವೇ ಕವಿಗಳನ್ನು ನಿಯಂತ್ರಿಸುವ ಶಕ್ತಿಯಾಗಿತ್ತು. ಹಳಗನ್ನಡದ ಬಹುತೇಕ ಕವಿಗಳು ರಾಜಾಶ್ರಯದಲ್ಲಿದ್ದುಕೊಂಡೇ ಸಾಹಿತ್ಯ ರಚಿಸಿದ್ದುಂಟು. ರಾಜನಿಂದ ಪೋಷಣೆ ಪಡೆದ ಮೇಲೆ ಕವಿಗಳು ಆತನನ್ನು ಸ್ತುತಿಸುವುದು, ಕಥಾನಾಯಕನೊಡನೆ ಒಂದು ಮಾಡಿ ವರ್ಣಿಸುವುದು ಸಾಮಾನ್ಯ. ಹೀಗೆ ಮಾಡಿದುದರಿಂದ ಕವಿಗಳಿಗೆ ಜನಸಾಮಾನ್ಯರ ನೋವಿಗೆ ಸ್ಪಂದಿಸುವುದಾಗಿಲ್ಲ, ಇದನ್ನಿಂದು ನಾವು ಬಯಸುವುದೂ ಒಂದು ದೃಷ್ಟಿಯಿಂದ ತಪ್ಪಾಗುತ್ತದೆ. ಏಕೆಂದರೆ ಆಯಾಕಾಲದ ಪರಿಸ್ಥಿತಿಗಳಿಗೆ ಅನುಗುಣವಾಗಿ ಸಾಹಿತ್ಯ ರಚನೆಗೊಂಡಿರುತ್ತದೆ.

ರಾಮಾಯಣ, ಮಹಾಭಾರತ ಹಾಗೂ ಜೈನ ತೀರ್ಥಂಕರರ ಚರಿತ್ರೆಗಳೇ ಹಳಗನ್ನಡ ಕವಿಗಳ ಕಾವ್ಯಕ್ಕೆ ವಸ್ತುವಾಗಿವೆ. ಲೌಕಿಕ ಹಾಗೂ ಆಗಮಿಕ–ಎರಡು ಪರಂಪರೆಗಳನ್ನು ಅವರ ಕಾವ್ಯಗಳಲ್ಲಿ ಗುರುತಿಸುವೆವು. ಲೌಕಿಕವೆಂದರೆ– ಲೋಕ ಜೀವನ, ಸಾಂಸಾರಿಕ ಜೀವನ. ಆಗಮಿಕವೆಂದರೆ ಧಾರ್ಮಿಕ ಮಹಾಪುರುಷರ ಚರಿತ್ರೆ ತತ್ವ–ಆಧ್ಯಾತ್ಮ ಮುಂತಾದ ವಿಷಯಗಳನ್ನೊಳಗೊಂಡಂಥದು. ಈ ಎರಡೂ ಪರಂಪರೆಯಲ್ಲಿ ಹುಟ್ಟಿಕೊಂಡ ಕಾವ್ಯಗಳು ಪಂಡಿತರಿಗೆ ಪ್ರಿಯವಾಗಿವೆ. ರಾಜ–ರಾಣಿ–ಪಂಡಿತರನ್ನು ಸಂತುಷ್ಟ ಪಡಿಸುವುದೇ ಇವುಗಳ ಪ್ರಮುಖ ಗುರಿ. ಕವಿಯು ತನ್ನ ಪಾಂಡಿತ್ಯವನ್ನು ಪ್ರದರ್ಶಿಸಿಕೊಳ್ಳುವ ಗೀಳು ಇವುಗಳಲ್ಲಿ ಹೆಚ್ಚಾಗಿ ಬರುವುದು. ಕವಿ ಸಮಯ, ಕೃತಕ ವರ್ಣನೆಗಳು, ನಿಜ ಜೀವನದ ಸಮಸ್ಯೆಗಳಿಂದ ದೂರಾದ ವಿವರಗಳು, ಹದಿನೆಂಟು ವರ್ಣನೆಗಳು ಮುಂತಾದುವು ಬಂದುದನ್ನು ಕಾಣುವೆವು. ಕಾವ್ಯಗಳಲ್ಲಿ ಹದಿನೆಂಟು ವರ್ಣನೆಗಳನ್ನು ತರುವುದೆಂದರೆ ಕವಿಗಳಿಗೆ ಎಲ್ಲಿಲ್ಲದ ಹುರುಪು. ಏಕೆಂದರೆ ಈ ವರ್ಣನೆಗಳನ್ನು ತಂದರೆ ಮಾತ್ರ ಅಂದು ಆ ಕಾವ್ಯ ಮಹಾಕಾವ್ಯವೆಂದು, ಶ್ರೇಷ್ಠ ಕಾವ್ಯವೆಂದು ಗಣಿಸಲ್ಪಡುತ್ತಿತ್ತು. ಸಂದರ್ಭ ಇರಲಿ, ಬಿಡಲಿ ಅನೇಕ ಕವಿಗಳು ಇಂಥ ವರ್ಣನೆ ತಂದದ್ದುಂಟು. ಇನ್ನು ಕೆಲ ಕವಿಗಳು ಸಂದರ್ಭ ಸೃಷ್ಟಿಸಿಕೊಂಡು ವರ್ಣಿಸಿದ್ದಾರೆ. ಸಮುದ್ರ, ಪರ್ವತ, ನಗರ, ರಾಜಕುಮಾರನ ವಿವಾಹ, ಅವನಿಗೆ ಪುತ್ರೋತ್ಸವ, ಸೂರ್ಯೋದಯ, ಚಂದ್ರೋದಯ, ಋತುವರ್ಣನೆ, ಅರಣ್ಯ, ಜಲಕ್ರೀಡೆ, ಮದ್ಯಪಾನ, ವಿಪ್ರಲಂಭ ಶೃಂಗಾರ, ಸಂಭೋಗ ಶೃಂಗಾರ, ಮಂತ್ರಾಲೋಚನೆ, ಜೂಜು, ಪ್ರಯಾಣ, ಯುದ್ಧ ಮತ್ತು ವಿಜಯ, ಇಂಥ ಹದಿನೆಂಟು ವರ್ಣನೆಗಳ ಸಿದ್ಧ ಚೌಕಟ್ಟನ್ನು ಹಳಗನ್ನಡ ಸಾಹಿತ್ಯ ಹೊಂದಿದುದರಿಂದಲೇ ಇಂದು ಅದರ ಬಹುಭಾಗ ಅಷ್ಟಾಗಿ ಪ್ರಸ್ತುತವೆನ್ನಿಸದು.

www.examrace.com

31. ಈ ಲೇಖನ ಭಾಗದಲ್ಲಿ ಲೇಖಕರು ಮುಖ್ಯವಾಗಿ ಚಿಂತಿಸಿರುವುದು

(A) ಹಳಗನ್ನಡ ಸಾಹಿತ್ಯದ ಧೋರಣೆಯನ್ನು

(B) ನಡುಗನ್ನಡ ಸಾಹಿತ್ಯದ ಧೋರಣೆಯನ್ನು

(C) ನಡುಗನ್ನಡ ಮತ್ತು ಹೊಸಗನ್ನಡ ಸಾಹಿತ್ಯದ ಧೋರಣೆಯನ್ನು

(D) ಹಳಗನ್ನಡ ಮತ್ತು ನಡುಗನ್ನಡ ಸಾಹಿತ್ಯದ ಧೋರಣೆಯನ್ನು

32. ಪಂಡಿತರನ್ನು ಮೆಚ್ಚಿಸುವ ಉದ್ದೇಶದಿಂದ ರಚನೆಗೊಂಡ ಸಾಹಿತ್ಯದಲ್ಲಿ

(A) ಪಾಂಡಿತ್ಯ ರಸಾನುಭವಕಾರಿಯಾಗುತ್ತದೆ.

(B) ಸಾಹಿತ್ಯ ನಿರ್ಮಿತಿಯು ಮಿತಿಗೊಳಗಾಗುತ್ತದೆ.

(C) ಕವಿಗೆ ಹೆಮ್ಮೆ ಉಂಟಾಗುತ್ತದೆ.

(D) ಜನ ಸಾಮಾನ್ಯರಿಗೆ ಅಭಿರುಚಿ ಉಂಟಾಗುತ್ತದೆ.

33. ಶಿವಶರಣ ಸಾಹಿತ್ಯ ಎಲ್ಲರಿಗೂ ಒಪ್ಪಿತವಾಗಲು ಕಾರಣ

1. ಜನರ ಆಡುಭಾಷೆಯನ್ನು ಬಳಸಿರುವುದು

2. ಧರ್ಮವನ್ನು ಆಧರಿಸಿದ ನಿಮಿತ್ತ

3. ಕವಿಗಳು ಪ್ರಭುಗಳ ಆಶ್ರಯವನ್ನು ನೆಚ್ಚಿದ್ದು

4. ಮೋಕ್ಷ ಸಂಪಾದನೆಯನ್ನು ಉದ್ದೇಶಿಸಿದ್ದು

ಇವುಗಳಲ್ಲಿ ಸರಿಯಾದ ಉತ್ತರ

(A) 1 ಮತ್ತು 2

(B) 1 ಮತ್ತು 3

(C) 2 ಮತ್ತು 4

(D) 2 ಮತ್ತು 3

34. ಇವುಗಳಲ್ಲಿ ಯಾವ ಜೋಡಿಯ ವಿವರ ಹಳಗನ್ನಡ ಸಾಹಿತ್ಯಕ್ಕೆ ಪ್ರೇರಣೆಯಾಗಲಿಲ್ಲ ?

(A) ಪಾಂಡಿತ್ಯ ಮತ್ತು ಪರಂಪರೆ

(B) ಧರ್ಮ ಮತ್ತು ರಾಜಾಶ್ರಯ

(C) ಅಧಿಕಾರ ಮತ್ತು ಪ್ರಶಸ್ತಿಗಳ ಬಯಕೆ

(D) ಸಂಸ್ಕೃತದ ಪ್ರಭಾವ ಮತ್ತು ಪ್ರಾಕೃತದ ಹಿನ್ನೆಲೆ.

www.examrace.com

35. ಮಹಾಕಾವ್ಯವೆಂದು ಪರಿಗಣಿತವಾಗಬೇಕಾದರೆ ಈ ಅಂಶಗಳು ಆಗತ್ಯವೆಂದು ಹಳಗನ್ನಡ ಕವಿಗಳು ಭಾವಿಸಿದ್ದರು

(A) ಆಶ್ರಿತ ರಾಜನನ್ನು ಕಾವ್ಯನಾಯಕನೊಡನೆ ಸಮೀಕರಿಸುವುದು

(B) ಅಷ್ಟಾದಶವರ್ಣನೆಗಳು, ನವರಸಗಳು ಹಾಗೂ ಕವಿ ಸಮಯಗಳ ಪ್ರಯೋಗ.

(C) ಚಾರಿತ್ರಿಕ ವ್ಯಕ್ತಿಗಳನ್ನು ಕಾವ್ಯನಾಯಕನನ್ನಾಗಿ ಮಾಡಿಕೊಳ್ಳುವುದು

(D) ಸಾಮಾಜಿಕ ನ್ಯಾಯವನ್ನು ಪ್ರತಿಪಾದಿಸುವುದು

<u>ಹೇಳಿಕೆ–ವಿವರಣೆ ಆಧಾರಿತ ಬಹು ಆಯ್ಕೆಯ ಮಾದರಿ</u>

36. ಹೇಳಿಕೆ : 'ದಯವೇ ಧರ್ಮದ ಮೂಲವಯ್ಯ' –

ವಿವರಣೆ: ಕೇವಲ ದಯೆ ತೋರುವುದರಿಂದ ಯಾರನ್ನೂ ಉದ್ಧರಿಸಲು ಸಾಧ್ಯವಿಲ್ಲ

(A) ಹೇಳಿಕೆ ಸರಿ ; ವಿವರಣೆ ತಪ್ಪು

(B) ಹೇಳಿಕೆ ತಪ್ಪು ; ವಿವರಣೆಯೂ ತಪ್ಪು

(C) ಹೇಳಿಕೆ ತಪ್ಪು ; ವಿವರಣೆ ಸರಿ

(D) ಹೇಳಿಕೆ ಸರಿ ; ವಿವರಣೆ ಸರಿ

37. ಹೇಳಿಕೆ : ಸಮಾನತೆ ಮತ್ತು ಸ್ವಾತಂತ್ರ್ಯತೆ ಎರಡೂ ಒಟ್ಟಿಗೆ ಹೋಗುವುದಿಲ್ಲ

ವಿವರಣೆ: ನಿಷ್ಠುರ ವ್ಯಕ್ತಿ ಸ್ವಾತಂತ್ರ್ಯ ಎಲ್ಲರಿಗೂ ಸಮಾನತೆಯನ್ನು ಒದಗಿಸುತ್ತದೆ.

(A) ಹೇಳಿಕೆ ಸರಿ ; ವಿವರಣೆ ತಪ್ಪು

(B) ಹೇಳಿಕೆ ತಪ್ಪು ; ವಿವರಣೆ ತಪ್ಪು

(C) ಹೇಳಿಕೆ ಸರಿ ; ವಿವರಣೆಯೂ ಸರಿ

(D) ಹೇಳಿಕೆ ತಪ್ಪು ; ವಿವರಣೆ ಸರಿ

38. ಹೇಳಿಕೆ : ಕವಿ ಹಾಗೂ ವಿಮರ್ಶಕರ ದೃಷ್ಟಿ ಒಂದೇ ಆಗಿರುವುದಿಲ್ಲ

ವಿವರಣೆ: ಕವಿ ಹಾಗೂ ಓದುಗರ ನಡುವೆ ವಿಮರ್ಶಕರು ಎಂದೂ ಅಡ್ಡಿಯಾಗಲಾರರು.

(A) ಹೇಳಿಕೆ ಸರಿ ; ವಿವರಣೆ ಸರಿ

(B) ಹೇಳಿಕೆ ಸರಿ ; ವಿವರಣೆ ತಪ್ಪು

(C) ಹೇಳಿಕೆ ತಪ್ಪು ; ವಿವರಣೆ ಸರಿ

(D) ಹೇಳಿಕೆ ತಪ್ಪು ; ವಿವರಣೆ ತಪ್ಪು

www.examrace.com

39. ಹೇಳಿಕೆ : ಮುಕ್ತ ಛಂದಸ್ಸಿನಲ್ಲಿ ರಚನೆಯಾಗುವ ಕಾವ್ಯ ಛಂದಸ್ಸಿನ ಯಾವ ನಿಯಮಗಳಿಗೂ ಬದ್ಧವಾಗಬೇಕಾಗಿರುವುದಿಲ್ಲ

ವಿವರಣೆ : ನಿಜವಾದ ಕಾವ್ಯದಲ್ಲಿ ಛಂದಸ್ಸು ಒಂದಲ್ಲ ಒಂದು ರೀತಿಯಲ್ಲಿ ಅಂತರ್ಗತವಾಗಿರುತ್ತದೆ.

(A) ಹೇಳಿಕೆ ತಪ್ಪು ; ವಿವರಣೆ ತಪ್ಪು

(B) ಹೇಳಿಕೆ ಸರಿ ; ವಿವರಣೆ ಸರಿ

(C) ಹೇಳಿಕೆ ತಪ್ಪು ; ವಿವರಣೆ ಸರಿ

(D) ಹೇಳಿಕೆ ಸರಿ ; ವಿವರಣೆ ತಪ್ಪು

<u>ಕೆಳಗಿನ ಜೋಡಿಗಳಲ್ಲಿ ಯಾವುದು ಸರಿಯಾಗಿ ಹೊಂದಿಕೆಯಾಗುತ್ತದೆ ?</u>

40. (A) ಷಡಕ್ಷರಿ – ರಾಜಶೇಖರ ವಿಳಾಸ

(B) ಪೊನ್ನ – ಅಜಿತ ಪುರಾಣ

(C) ಆಂಡಯ್ಯ – ಸಮಯ ಪರೀಕ್ಷೆ

(D) ಕುಮಾರ ವಾಲ್ಮೀಕಿ – ರಾಮಚಂದ್ರ ಚರಿತ ಪುರಾಣ

41. (A) ಕಡೆಂಗೋಡ್ಲು ಶಂಕರಭಟ್ಟ – ಸಾಮಗಾನ

(B) ಗೋವಿಂದ ಪೈ – ಹೃದಯರಂಗ

(C) ಚೆನ್ನವೀರ ಕಣವಿ – ಪ್ರೇಮ ಕಾಶ್ಮೀರ

(D) ಗಂಗಾಧರ ಚಿತ್ತಾಲ – ಗರಿ

<u>ಕೆಳಗಿನ ಜೋಡಿಗಳಲ್ಲಿ ಯಾವುದು ಸರಿಯಾಗಿ ಹೊಂದಿಕೆಯಾಗುವುದಿಲ್ಲ ?</u>

42. (A) ಮಮ್ಮಟ – ಕಾವ್ಯಪ್ರಕಾಶ

(B) ಆನಂದವರ್ಧನ – ಧ್ವನ್ಯಾಲೋಕ

(C) ಭರತ – ನಾಟ್ಯಶಾಸ್ತ್ರ

(D) ಅಭಿನವಗುಪ್ತ – ಕಾವ್ಯಾಲಂಕಾರ

www.examrace.com

43. (A) ಐ.ಎ.ರಿಚರ್ಡ್ಸ್ – ಪ್ರಿನ್ಸಿಪಲ್ಸ್ ಆಫ್ ಲಿಟರರಿ ಕ್ರಿಟಿಸಿಸಂ

(B) ಲಾಂಜಿನಸ್ – ಪೆರಿಹುಪ್ಸಾಸ್

(C) ಸಿ.ಜೆ.ಯುಂಗ್ – ಸೆಲೆಕ್ಟೆಡ್ ಪ್ರೋಸ್

(D) ಅರಿಸ್ಟಾಟಲ್ – ಪೊಯೆಟಿಕ್ಸ್

<u>ಕೆಳಗಿನ ಜೋಡಿಗಳಲ್ಲಿ ಯಾವುದು ಸರಿಯಾಗಿ ಹೊಂದಿಕೆಯಾಗುತ್ತದೆ ?</u>

44. (A) ಹಂಪ, ನಾಗರಾಜಯ್ಯ – ದ್ರಾವಿಡ ಭಾಷಾ ವಿಜ್ಞಾನ

(B) ಹೆಚ್.ಎಸ್.ಬಿಳಿಗಿರಿ – ಕನ್ನಡ ಭಾಷಾ ಚರಿತ್ರೆ

(C) ಕುಶಾಲಪ್ಪ ಗೌಡ ಕೆ. – ಸಾಮಾನ್ಯ ಭಾಷಾ ವಿಜ್ಞಾನ

(D) ಕೆಂಪೇಗೌಡ ಕೆ. – ಕನ್ನಡ ಭಾಷಾವಲೋಕನ

<u>ಬಹು ಆಯ್ಕೆಯ ಜೋಡಣೆ</u>

45. a. ರನ್ನ – I ಭರತೇಶವೈಭವ

b. ಹರಿಹರ – II ಸಾಹಸಭೀಮವಿಜಯ

c. ನಾಗಚಂದ್ರ – III ಗಿರಿಜಾ ಕಲ್ಯಾಣ

d. ರತ್ನಾಕರವರ್ಣಿ – IV ರಾಮಚಂದ್ರಚರಿತ ಪುರಾಣ

V ವರ್ಧಮಾನ ಪುರಾಣ

ಇವುಗಳಲ್ಲಿ ಸರಿಯಾದ ಉತ್ತರ

| | a | b | c | d |
|---|---|---|---|---|
| (A) | I | III | II | IV |
| (B) | II | III | IV | I |
| (C) | I | II | IV | III |
| (D) | II | IV | III | I |

www.examrace.com

46. a. ಕಾಕನ ಕೋಟೆ – I ಚಂದ್ರಶೇಖರ ಕಂಬಾರ

b. ಮಹಾಚೈತ್ರ – II ಗಿರೀಶ್ ಕಾರ್ನಾಡ್

c. ಹಯವದನ – III ಎಚ್.ಎಸ್.ಶಿವಪ್ರಕಾಶ್

d. ಜೈಸಿದನಾಯ್ಕ – IV ಶ್ರೀನಿವಾಸ

V ಟಿ.ಪಿ.ಕೈಲಾಸಂ

ಇವುಗಳಲ್ಲಿ ಸರಿಯಾದ ಉತ್ತರ

| | a | b | c | d |
|---|---|---|---|---|
| (A) | I | II | IV | III |
| (B) | II | I | III | IV |
| (C) | III | IV | II | I |
| (D) | IV | III | II | I |

47. a. ಇಂದ – I ದ್ವಿತೀಯಾ ವಿಭಕ್ತಿ

b. ಅಲ್ಲಿ – II ಚತುರ್ಥೀ ವಿಭಕ್ತಿ

c. ಅನ್ನು – III ಸಪ್ತಮಿ ವಿಭಕ್ತಿ

d. ಗೆ – IV ತೃತೀಯಾ ವಿಭಕ್ತಿ

e. ಆಗೆ

ಇವುಗಳಲ್ಲಿ ಸರಿಯಾದ ಉತ್ತರ

| | a | b | c | d |
|---|---|---|---|---|
| (A) | III | IV | I | II |
| (B) | I | II | IV | III |
| (C) | IV | III | I | II |
| (D) | II | IV | III | I |

www.examrace.com

ಅನುಕ್ರಮ ಮಾದರಿ

ಈ ಕೆಳಗಿನ ಕಾಲಾನುಕ್ರಮದ ಸರಣಿಗಳಲ್ಲಿ ಉತ್ತರದ ಸಂಜ್ಞೆಯನ್ನು ನಿಗದಿತ ಸ್ಥಳದಲ್ಲಿ ಗುರುತಿಸಿರಿ.

**48.** (A) ಚಾಮರಸ; ಚಿಕ್ಕದೇವರಾಯ; ಪೊನ್ನ; ಸಕಲೇಶ ಮಾದರಸ

(B) ಪೊನ್ನ; ಸಕಲೇಶ ಮಾದರಸ; ಚಾಮರಸ; ಚಿಕ್ಕದೇವರಾಯ

(C) ಸಕಲೇಶ ಮಾದರಸ; ಪೊನ್ನ; ಚಿಕ್ಕದೇವರಾಯ; ಚಾಮರಸ

(D) ಚಿಕ್ಕದೇವರಾಯ; ಚಾಮರಸ; ಪೊನ್ನ; ಸಕಲೇಶ ಮಾದರಸ

**49.** (A) ಇಂಗ್ಲಿಷ್ ಗೀತೆಗಳು; ಮೈಸೂರು ಮಲ್ಲಿಗೆ; ಹೇಸರಗತ್ತೆ; ಸಾವಿರಾರು ನದಿಗಳು

(B) ಮೈಸೂರು ಮಲ್ಲಿಗೆ; ಇಂಗ್ಲಿಷ್ ಗೀತೆಗಳು; ಸಾವಿರಾರು ನದಿಗಳು; ಹೇಸರಗತ್ತೆ

(C) ಹೇಸರಗತ್ತೆ; ಇಂಗ್ಲಿಷ್ ಗೀತೆಗಳು; ಸಾವಿರಾರು ನದಿಗಳು; ಮೈಸೂರು ಮಲ್ಲಿಗೆ

(D) ಸಾವಿರಾರು ನದಿಗಳು; ಮೈಸೂರು ಮಲ್ಲಿಗೆ; ಇಂಗ್ಲಿಷ್ ಗೀತೆಗಳು; ಹೇಸರಗತ್ತೆ

**50.** (A) ಕೆ.ವಿ.ಅಯ್ಯರ್; ಶ್ರೀಕೃಷ್ಣ ಆಲನ ಹಳ್ಳಿ; ಶಾಂತಿನಾಥ ದೇಸಾಯಿ; ಗುಲ್ವಾಡಿ ವೆಂಕಟರಾಯರು

(B) ಶಾಂತಿನಾಥ ದೇಸಾಯಿ; ಗುಲ್ವಾಡಿ ವೆಂಕಟರಾಯರು; ಶ್ರೀಕೃಷ್ಣ ಆಲನ ಹಳ್ಳಿ; ಕೆ.ವಿ.ಅಯ್ಯರ್

(C) ಶ್ರೀಕೃಷ್ಣ ಆಲನ ಹಳ್ಳಿ; ಕೆ.ವಿ.ಅಯ್ಯರ್; ಗುಲ್ವಾಡಿ ವೆಂಕಟರಾಯರು; ಶಾಂತಿನಾಥ ದೇಸಾಯಿ

(D) ಗುಲ್ವಾಡಿ ವೆಂಕಟರಾಯರು; ಕೆ.ವಿ.ಅಯ್ಯರ್; ಶಾಂತಿನಾಥ ದೇಸಾಯಿ; ಶ್ರೀಕೃಷ್ಣ ಆಲನ ಹಳ್ಳಿ

- o 0 o -

www.examrace.com